<u>ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹೊಸನಗರ .</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಉಮೇಶ ಕೆ.ಹೆಚ್. | ಪಿ.ಡಬ್ಲ್ಯೂ- 4 |
| ತಂದೆಯ ಹೆಸರು | : | ಬೆಳ್ಳಿ ಹುಚ್ಚಪ್ಪ | ಸಿ.ಡಬ್ಲ್ಯೂ- 1 |
| ವಯಸ್ಸು | : | 38 ವರ್ಷ | ಪ್ರಾಮಾಣೀಕರಿಸಿದ |
| ಉದ್ಯೋಗ | : | ಮುಖ್ಯ ಪೇದೆ,ರಿಪ್ಪನ್‌ಪೇಟೆ ಪೋಲೀಸ್ ಠಾಣೆ. | ದಿ: 06/11/2024 |
| ವಾಸ | : | ರಿಪ್ಪನ್‌ಪೇಟೆ. | |

<u>ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ. ರವರಿಂದ:-</u>

ನಾನು 2020 ಮಾರ್ಚ್ ತಿಂಗಳಿನಿಂದ ರಿಪ್ಪನ್‌ಪೇಟೆ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 16-11-2022 ರಂದು ರಾತ್ರಿ 08-30 ರ ಸಮಯದಲ್ಲಿ ಠಾಣಾಧಿಕಾರಿಗಳು ನಮ್ಮ ಠಾಣೆಯ ಪಿ.ಎಸ್.ಐ. ಶಿವಾನಂದರವರು ರಿಪ್ಪನ್‌ಪೇಟೆ ಪಟ್ಟಣ ಗಸ್ತು ಕರ್ತವ್ಯಕ್ಕೆ ನನ್ನನ್ನು ಮತ್ತು ಚಾ.ಸಾ.-2 ರವರನ್ನು ನೇಮಿಸಿರುತ್ತಾರೆ. ನಂತರ ನಾವು ವಿನಾಯಕ ಸರ್ಕಲ್, ಸಾಗರ ರಸ್ತೆಯಲ್ಲಿ ಗಸ್ತು ತಿರುಗಿ ನಂತರ ರಾತ್ರಿ 08-45 ರ ಸಮಯದಲ್ಲಿ ಸಂತೆ ಮಾರ್ಕೆಟ್ ಬಳಿ ಬಂದಾಗ ಓರ್ವ ಆಸಾಮಿ ಆಕಡೆ- ಈಕಡೆ ಅಸಭ್ಯವಾಗಿ ಓಡಾಡುತ್ತಿದ್ದಾಗ ನಾವು ಆತನನ್ನು

ಹಿಡಿದು ಹೆಸರು ಮತ್ತು ವಿಳಾಸ ಕೇಳಲಾಗಿ ತನ್ವಿರ್ ತಂದೆ ರಫೀಕ್, ಮದೀನ ಕಾಲೋನಿ, ರಿಪ್ಪನ್ ಪೇಟೆ ಎಂದು ಹೇಳಿರುತ್ತಾರೆ. ಸದರಿ ಆಸಾಮಿ ಮಾತನಾಡುತ್ತಿದಾಗ ತೊದಲುಸುತಿದ್ದು ಮತ್ತು ಮಾತನಾಡುವಾಗ ಆತನ ಬಾಯಿಯಿಂದ ಅಮಲು ಪದಾರ್ಥದ ವಾಸನೆ ಬರುತ್ತಿತ್ತು. ನಂತರ ಸದರಿ ಆಸಾಮಿಯನ್ನು ನಾವು ವಿಚಾರಿಸಿದಾಗ ಸ್ವಲ್ಪ ಹೊತ್ತಿನ ಮುಂಚೆ ಒಂದು ಬೀಡಿಯಲ್ಲಿ ಗಾಂಜಾ ಸೇವನೆ ಮಾಡಿರುತ್ತೇನೆ ಎಂದು ಹೇಳಿರುತ್ತಾರೆ. ನಂತರ ಸದರಿ ಗಾಂಜಾ ಯಾರು ಪೂರೈಸಿರುತ್ತಾರೆಂದು ಕೇಳಿದಾಗ ಸಿದ್ದೇಶ ತಂದೆ ಗಣಪತಿ ಭಂಡಾರಿ, ಸಿದ್ದಪ್ಪನ ಗುಡಿ, ರಿಪ್ಪನ್‌ಪೇಟೆ ಎಂದು ಹೇಳಿರುತ್ತಾರೆ. ನಂತರ ಅದೇ ದಿನ ರಾತ್ರಿ **08-50** ರ ಸಮಯದಲ್ಲಿ ತನ್ವೀರ್ ನನ್ನು ವಶಕ್ಕೆ ಪಡೆದು ರಾತ್ರಿ **09-00** ಗಂಟೆಗೆ ಠಾಣೆಗೆ ಕರೆದುಕೊಂಡು ಬಂದು ಆತನು ಅಮಲು ಪದಾರ್ಥ ಸೇವಿಸಿರುವುದನ್ನು ಖಚಿತ ಪಡಿಸಿಕೊಳ್ಳಲು ವೈದ್ಯಕೀಯ ತಪಾಸಣೆಗಾಗಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಂತರ ಸದರಿ ಆಸ್ಪತ್ರೆಯಲ್ಲಿ ಸದರಿ ತನ್ವೀರ್ ನನ್ನು ವೈದ್ಯರು ವೈದ್ಯಕೀಯ ತಪಾಸಣೆಗೆ ಒಳಪಡಿಸಿ ಅವಲು ಪದಾರ್ಥ ಸೇವಿಸಿರುವುದು ದೃಢಪಟ್ಟಿರುತ್ತದೆ ಎಂದು ವೈದ್ಯರು ವರದಿ ಕೊಟ್ಟಿರುತ್ತಾರೆ. ನಂತರ ದಿನಾಂಕ **17-11-2022** ರಂದು ಬೆಳಗಿನಜಾವ **12-45** ಗಂಟೆಗೆ ಠಾಣೆಗೆ ಕರೆದುಕೊಂಡು ಬಂದು ಠಾಣಾಧಿಕಾರಿ

ಮುಂದೆ ಮುಂದಿನ ಕ್ರಮಕ್ಕೆ ಹಾಜರುಪಡಿಸಿ ವರದಿ ನೀಡಿರುತ್ತೇವೆ. ನಾನು ದೂರು ಕೊಟ್ಟಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು ದೂರನ್ನು ನಿ.ಪಿ.-3 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.-3(ಎ) ಎಂದು ಗುರುತಿಸಲಾಯಿತು.

ನಂತರ ದಿನಾಂಕ 17-11-2022 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿಕೊಟ್ಟು ನಾನು ತೋಸಿರಿದ ಕೃತ್ಯ ನಡೆದ ಸ್ಥಳದಲ್ಲಿ ಪಂಚರಾದ ಚಾ.ಸಾ.-3 ಮತ್ತು 4 ರವರ ಸಮಕ್ಷಮ ಬೆಳಿಗ್ಗ 10-00 ಗಂಟೆಯಿಂದ 11-00 ಗಂಟೆಯವರೆಗೆ ಚಾ.ಸಾ.-6 ರವರು ಮಹಜರ್ ಕ್ರಮ ಜರುಗಿಸಿ, ಕಚ್ಚಾ ನಕ್ಷೆ ತಯಾರಿಸಿ ಭಾವಚಿತ್ರ ತೆಗೆಸಿರುತ್ತಾರೆ. ಸಾಕ್ಷಿಯು ನಿ.ಪಿ.-1 ಮಹಜರ್ ಮತ್ತು ನಿ.ಪಿ.-2 ಕಚ್ಚಾ ನಕ್ಷೆಯನ್ನು ನೋಡಿ ತನ್ನ ಸಹಿಗಳನ್ನು ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿ.ಪಿ.-1(ಸಿ) ಮತ್ತು ನಿ.ಪಿ.-2(ಸಿ) ಎಂದು ಗುರುತಿಸಲಾಯಿತು. 1 ನೇ ಆರೋಪಿಯನ್ನು ಪುನಃ ನೋಡಿದರೆ ಗುರುತಿಸುತ್ತೇನೆ. 1 ನೇ ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು ವಿನಾಯಿತಿ ಅರ್ಜಿ ಸಲ್ಲಿಸಿದ್ದು ಸದರಿ ಆರೋಪಿಯನ್ನು ಗುರುತಿಸಲು ಯಾವುದೇ ತಕರಾರು ಇಲ್ಲಾ ಎಂದು 1 ನೇ ಆರೋಪಿ ಪರ ಶ್ರೀ ವೈ.ಪಿ.ಎಂ. ವಕೀಲರು ಹೇಳಿರುತ್ತಾರೆ.

<u>ಪಾಟೀ ಸವಾಲು:</u>- **1** ನೇ ಆರೋಪಿ ಪರ ಶ್ರೀ ವೈ.ಪಿ.ಎಂ. ವಕೀಲರಿಂದ.

ದಿನಾಂಕ **16-11-2022** ರಂದು ನಮ್ಮನ್ನು ಗಸ್ತು ಕರ್ತವ್ಯಕ್ಕೆ ಮೌಖಿಕವಾಗಿ ನೇಮಿಸಿದ್ದರು. ಸಂಜೆ ಮಾರ್ಕೆಟ್ ನಿಂದ ನಮ್ಮ ಠಾಣೆ ಕಣ್ಣಳತೆ ದೂರದಲ್ಲಿ ಇದೆ ಎಂದರೆ**?** ಸಾಕ್ಷಿಯು **500** ಮೀಟರ್ ದೂರ ಇದೆ ಎಂದು ಹೇಳುತ್ತಾರೆ. ಸಂತೆ ಮಾರ್ಕೆಟ್ ಹತ್ತಿರ ವಾಸದ ಮನೆಗಳು ಇವೆ ಎಂದರೆ ಸರಿ. ಅಲ್ಲಿ ಜನ ಮಧ್ಯ ರಾತ್ರಿ **11-00** ರಿಂದ **12-00** ಗಂಟೆಯವರೆಗೂ ಓಡಾಡುತ್ತಿರುತ್ತಾರೆ ಎಂದು ಹೇಳುತ್ತಾರೆ .

**1** ನೇ ಆರೋಪಿಯನ್ನು ವಶಕ್ಕೆ ಪಡೆದಾಗ ಮಹಜರ್ ಕ್ರಮ ಜರುಗಿಸಿರುವುದಿಲ್ಲ. ನನ್ನ ಕಣ್ಣೆದುರಿಗೆ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿ. **1** ನೇ ಆರೋಪಿಯನ್ನು ರಿಪ್ಪನ್‌ಪೇಟೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ವೈದ್ಯಕೀಯ ತಪಾಸಣೆ ಮಾಡಿಸಿರುವುದಿಲ್ಲ. ದಿನಾಂಕ **16-11-2022** ರಂದು **1** ನೇ ಆರೋಪಿಯನ್ನು ರಾತ್ರಿ **09-10** ರ ಸಮಯದಲ್ಲಿ ಠಾಣೆಗೆ ಕರೆದುಕೊಂಡು ಬಂದಿರುತ್ತೇನೆ. ಆ ಸಮಯದಲ್ಲಿ ದೂರು ಕೊಡುವುದಕ್ಕೆ ನನಗೆ ಯಾವುದಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ವೈದ್ಯಕೀಯ ತಪಾಸಣೆಗೊಸ್ಕರ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದು

ಹೇಳುತ್ತಾರೆ. **1** ನೇ ಆರೋಪಿಯನ್ನು ವೈದ್ಯಕೀಯ ತಪಾಸಣೆಗೋಸ್ಕರ ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದೆವು ಎಂದು ಅವರ ಮನೆಯವರಿಗೆ ತಿಳಿಸಿರುತ್ತೇವೆ. ಅದೇ ದಿನ **1** ನೇ ಆರೋಪಿಯನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಯಾರು ಯಾರು **1** ನೇ ಆರೋಪಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು ಎಂದರೆ**?** ನಾನು**,** ಮಂಜಪ್ಪ ಎ.ಎಸ್.ಐ. ಮತ್ತು ಪಿ.ಸಿ. **890** ರವರು ಕರೆದುಕೊಂಡು ಹೋಗಿರುತ್ತೇವೆ ಎಂದು ಹೇಳುತ್ತಾರೆ. ಆಸ್ಪತ್ರೆಯಲ್ಲಿ **1** ನೇ ಆರೋಪಿಯನ್ನು ಯಾವ ವೈದ್ಯರು ತಪಾಸಣೆ ಮಾಡಿರುತ್ತಾರೆ ಎಂದರೆ**?** ಸಾಕ್ಷಿಯು ವೈದ್ಯರ ಹೆಸರು ಗೊತ್ತಿಲ್ಲ ಎಂದು ಹೇಳುತ್ತಾರೆ.

ದಿನಾಂಕ **17-11-2022** ರಂದು **1** ನೇ ಆರೋಪಿಯನ್ನು ಆಸ್ಪತ್ರೆಯಿಂದ ಠಾಣೆಗೆ ಕರೆದುಕೊಂಡು ಬಂದಾಗ ಆತನ ಚಹರೆ**,** ಬಟ್ಟೆ ಮತ್ತು ಅಂಗಶೋಧನೆ ಮಾಡಿದ್ದೀರಾ ಎಂದರೆ**?** ಸಾಕ್ಷಿಯು ನಾನು ದೂರು ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ನಾನು ಮೊದಲು ದೂರು ಕೊಟ್ಟ ನಂತರ ಸ್ಥಳದಲ್ಲಿ ಮಹಜರ್ ಮಾಡಿರುತ್ತಾರೆ. ಬೆಳಿಗ್ಗೆ **10-00** ಗಂಟೆಯಿಂದ **11-00** ಗಂಟೆಯವರೆಗೆ

ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿರುತ್ತಾರೆ. ನಾನು ದಿನಾಂಕ **17-11-2022** ರಂದು ಬೆಳಿಗ್ಗೆ **01-00** ಗಂಟೆಗೆ ದೂರು ಕೊಟ್ಟಿರುತ್ತೇನೆ.

ಪಂಚರಾದ ಚಾ.ಸಾ.-**2** ಮತ್ತು **3** ರವರನ್ನು ಸ್ಥಳಕ್ಕೆ ಯಾರು ಮತ್ತು ಎಲ್ಲಿಂದ ಕರೆದುಕೊಂಡು ಬಂದಿರುತ್ತಾರೆ ಎಂದರೆ? ಸಾಕ್ಷಿಯು ಚಾ.ಸಾ.-**6** ರವರು ಕರೆದುಕೊಂಡು ಬಂದಿದ್ದು ಎಲ್ಲಿಂದ ಕರೆದುಕೊಂಡು ಬಂದಿರುತ್ತಾರೆ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ. ಪಂಚರಿಗೆ ನೋಟೀಸ್ ಕೊಟ್ಟು ಕರೆಸಿದ್ದೀರಾ ಎಂದರೆ? ಸಾಕ್ಷಿಯು ಪಂಚರನ್ನು ಚಾ.ಸಾ.-**6** ರವರು ಕರೆದುಕೊಂಡು ಬಂದಿದ್ದರು ಎಂದು ಹೇಳುತ್ತಾರೆ.

ನಾವು ಒಟ್ಟು **5** ಜನ ಮಹಜರ್ ಗೆ ಸ್ಥಳಕ್ಕೆ ಹೋಗಿರುತ್ತೇವೆ. ಪಂಚರಾದ ಚಾ.ಸಾ.-**3** ಮತ್ತು **4** ರವರು ಸ್ಥಳದ ಅಕ್ಕ-ಪಕ್ಕ ವಾಸಿಗಳಲ್ಲ ಎಂದರೆ ಸರಿ. ಸ್ಥಳೀಯ ನಿವಾಸಿಗಳನ್ನು ಪಂಚನಾಮೆಗೆ ಕರೆಸಿರುವುದಿಲ್ಲ. ಮಹಜರ್ ಅನ್ನು ಚಾ.ಸಾ.-**6** ರವರು ಬರೆದಿರುತ್ತಾರೆ. ಮಹಜರ್ ಬರೆಯಲಿಕ್ಕೆ ಪಂಚರು ಮಾಹಿತಿ ಕೊಟ್ಟಿರುತ್ತಾರೆ. ಮಹಜರ್ ಕಾಲಕ್ಕೆ ಸ್ಥಳದಲ್ಲಿ ಬೆಂಕಿಪಟ್ಟಣ ಮತ್ತು ಬೀಡಿ ತುಂಡುಗಳು ಬಿದ್ದಿರಲಿಲ್ಲ. ನಮ್ಮ ಠಾಣೆಯಲ್ಲಿ **1** ನೇ ಆರೋಪಿಯ ವಿರುದ್ಧ ಯಾವುದೇ ಪ್ರಕರಣ ದಾಖಲಾಗಿರುವುದಿಲ್ಲ ಎಂದರೆ ಸರಿ. **1** ನೇ ಆರೋಪಿಯು

ವ್ಯಾಪಾರಕ್ಕಾಗಿ ಅಂಗಡಿಗೆ ರಾತ್ರಿ **09-00** ಗಂಟೆಯವರೆಗೆ ಹೋಗುತ್ತಾರೆ ಹಾಗೂ **1** ನೇ ಆರೋಪಿಯು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಸುಳ್ಳು ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. **1** ನೇ ಆರೋಪಿಗೆ ವಯಸ್ಸಾದ ತಂದೆ-ತಾಯಿಗಳಿದ್ದು ಕುಟುಂಬದ ಜವಾಬ್ದಾರಿಯನ್ನು ಆತನೇ ನೋಡಿಕೊಳ್ಳುತ್ತಿದ್ದು **1** ನೇ ಆರೋಪಿಯು ಯಾವುದೇ ದುಶ್ಚಟ ಮಾಡುವುದಿಲ್ಲ ಎಂದರೆ**?** ಸಾಕ್ಷಿಯು ವೈದ್ಯಕೀಯ ವರದಿ ಪ್ರಕಾರ **1** ನೇ ಆರೋಪಿಯು ದುಶ್ಚಟ ಮಾಡುತ್ತಾನೆ ಎಂದು ಹೇಳುತ್ತಾರೆ. **1** ನೇ ಆರೋಪಿಯಿಂದ ಬೆಂಕಿಪಟ್ಟಣ, ಬೀಡಿ ಮತ್ತು ಗಾಂಜಾ ಸೊಪ್ಪನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಆ ದಿನ ನನ್ನನ್ನು ಸಂತೆ ಮಾರ್ಕೆಟ್ ನಲ್ಲಿ ಗಸ್ತು ಕರ್ತವ್ಯಕ್ಕೆ ನೇಮಿಸಿದ್ದಾಗಲಿ, ನಾನು **1** ನೇ ಆರೋಪಿಯನ್ನು ವಶಕ್ಕೆ ಪಡೆದಿದ್ದಾಗಲಿ ಮತ್ತು ಆತನು ಗಾಂಜಾ ಸೇವನೆ ಮಾಡಿರುವುದಾಗಲಿ, ಮಹಜರ್ ಕಾಲಕ್ಕೆ ಮಹಜರ್ ಮತ್ತು ಕಚ್ಚಾ ನಕ್ಷೆ ತಯಾರಿಸಿರುವುದಾಗಲಿ ಸುಳ್ಳು ಎಂದರೆ ಸರಿಯಲ್ಲ. ಅದೇ ರೀತಿ **1** ನೇ ಆರೋಪಿಯನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ ಮಾಡಿಕೊಂಡು ಬಂದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. **1** ನೇ ಆರೋಪಿಗೆ ಆಗದವರ ಮಾತು ಕೇಳಿ ಆತನ ವಿರುದ್ಧ ಸುಳ್ಳು ದೂರುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. **1** ನೇ ಆರೋಪಿಗೆ ಯಾವುದೇ

ದುಶ್ಚಟಗಳು ಇಲ್ಲವಾದ್ದರಿಂದ ಈ ಪ್ರಕರಣದಲ್ಲಿ ಉದ್ದೇಶಪೂರ್ವಕವಾಗಿ ಆತನನ್ನು ಈ ಪ್ರಕರಣದಲ್ಲಿ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ಕಚ್ಚಾ ನಕ್ಷೆಯನ್ನು ಸ್ಥಳದಲ್ಲಿ ತಯಾರಿಸದೇ ಠಾಣೆಯಲ್ಲಿ ಕುಳಿತು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಇಲಾಖೆಯ ಅಂಕೆ-ಸಂಖ್ಯೆಗೊಸ್ಕರ ನಾನು ಮತ್ತು ಚಾ.ಸಾ.-6 ಸೇರಿ 1 ನೇ ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u>- 2 ನೇ ಆರೋಪಿ ಪರ ಶ್ರೀ ಕೆ.ಎಸ್. ವಕೀಲರಿಂದ.

2 ನೇ ಆರೋಪಿಯು 1 ನೇ ಆರೋಪಿಗೆ ಯಾವತ್ತೂ ಗಾಂಜಾ ಸೊಪ್ಪು ಕೊಟ್ಟಿದದರು ಎಂದು ಹೇಳಲು ಆಗುವುದಿಲ್ಲ. ಗಾಂಜಾ ಸೊಪ್ಪನ್ನು ಎಲ್ಲಿ ಕೊಟ್ಟಿದ್ದರು ಎಂದು 1 ನೇ ಆರೋಪಿ ತಿಳಿಸಿದ್ದರಾ ಎಂದರೆ? ಸಾಕ್ಷಿಯು ಶಿವಮೊಗ್ಗದ ಬಸ್ ಸ್ಟ್ಯಾಂಡ್ ನಲ್ಲಿ ಕೊಟ್ಟಿದ್ದರು ಎಂದು ಹೇಳಿರುತ್ತಾರೆ ಎಂದು ಹೇಳುತ್ತಾರೆ. 2 ನೇ ಆರೋಪಿಯು ಗಾಂಜಾ ಸೊಪ್ಪನ್ನು ತನಗೆ ಎಲ್ಲಿ ಕೊಟ್ಟಿರುತ್ತಾರೆ ಎಂದು1 ನೇ ಆರೋಪಿಯು ನನಗೆ ಹೇಳಿರುವುದಿಲ್ಲ. ನಾನಾಗಲಿ ನಮ್ಮ ತನಿಖಾಧಿಕಾರಿಯಾಗಲಿ ಸದರಿ ಸ್ಥಳಕ್ಕೆ ಹೋಗಿ ಸ್ಥಳ ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಯು 1 ನೇ ಆರೋಪಿಗೆ

ಗಾಂಜಾ ಸೊಪ್ಪು ಕೊಟ್ಟಿರುವುದಾಗಲಿ ಮತ್ತು **1** ನೇ ಆರೋಪಿಯು ಗಾಂಜಾ ಸೊಪ್ಪನು ಸೇವನೆ ಮಾಡಿರುವುದಾಗಲಿ ಸುಳ್ಳು ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದೇ ಇದ್ದರೂ ಸಹ ಇಲಾಖಾ ಅಂಕೆ-ಸಂಖ್ಯೆಗೊಸ್ಕರ ಸುಳ್ಳು ದೂರುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈ ಘಟನೆಗೂ ಮತ್ತು **2** ನೇ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

(ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ .